ಒಎಸ್ ಸಂ.ಃ175/2013
ಪಿಡಬ್ಲ್ಯೂ ಃ 2
ದಿನಾಂಕ 08-02-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ಶ್ರೀ ಕೆಆರ್ಆರ್ ವಕೀಲರಿಂದ

ವಾದಿಯರ ವಂಶವೃಕ್ಷವನ್ನು ತೋರಿಸಲು ದಾಖಲೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ವಕೀಲರಿಗೆ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ನನ್ನ ತಾಯಿಯೊಂದಿಗೆ ನಾನು ಸಹ ವಕೀಲರ ಬಳಿ ಹೋಗಿದ್ದೆ. ದಾಖಲೆಗಳನ್ನು ನಮ್ಮ ಮಾವ ನಾರಾಯಣಸ್ವಾಮಿಯವರು ಪಡೆದುಕೊಂಡಿರುತ್ತಾರೆ. ನಮ್ಮ ಮಾವ ಯಾವ ವರ್ಷ ದಾಖಲೆಗಳನ್ನು ಪಡೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಗಳಲ್ಲಿ ಯಾವ ಯಾವ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಮತ್ತು ಯಾವ ಯಾವ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂಬ ಪ್ರಶ್ನೆಗೆ ಸಾಕ್ಷಿಯು ಎಲ್ಲವೂ ಪಿತ್ರಾರ್ಜಿತ ಆಸ್ತಿಗಳೇ ಎಂದು ಹೇಳುತ್ತಾರೆ. ಸರ್ವೆ ನಂ.24/1 ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಆ ಆಸ್ತಿ ಮುನಿಯಪ್ಪನ ಕಡೆಯಿಂದ ಬಂದಿರುತ್ತದೆ. ಆ ದಾಖಲೆಯಲ್ಲಿ ಮುನಿಯಪ್ಪನ ಕಡೆಯಿಂದ ಬಂದಿದೆ ಎಂದು ನಮೂದು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದನ್ನು ಸೃಷ್ಟಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಆ ಆಸ್ತಿಯು ನಮ್ಮ ಒಟ್ಟು ಕುಟುಂಬಕ್ಕೆ ಸಂಬಂಧಿಸಿದ್ದು ಅದು ನಮ್ಮ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಆ ಆಸ್ತಿಯು ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ಪಹಣಿ ಪತ್ರಿಕೆಯನ್ನು ಹೊರತು ಪಡಿಸಿ ಬೇರೆ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ.

ಸರ್ವೆ ನಂ.24/2 ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಆ ಆಸ್ತಿಯನ್ನು ಮುನಿಯಪ್ಪರವರು ಸೈಯದ್ ಅಪ್ಸರ್ ಪಾಷ ಇವರಿಗೆ ಮಾರಾಟ ಮಾಡಿರುತ್ತಾರೆ. ಅವರು ಮಾರಾಟ ಮಾಡಿ ಸುಮಾರು 10-20 ವರ್ಷಗಳಾಗಿರಬಹುದು. ಆ ದಾಖಲೆಯನ್ನು ನಾನು ನೋಡಿರುತ್ತೇನೆ ಅದನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪಾಪಣ್ಣ ಉರುಪ್ ಅಪ್ಪಣ್ಣ ಇವರು ನಮ್ಮ ತಾತ. ಸರ್ವೆ ನಂ.24/1 ನ್ನು ಮುನಿಸ್ವಾಮಿಯವರು ಮಾರಾಟ ಮಾಡಿರುತ್ತಾರೆ. ಅದನ್ನು ಮಾರಾಟ ಮಾಡಿ ಎಷ್ಟು ವರ್ಷಗಳಾಯಿತು ಎಂದು ನನಗೆ ಗೊತ್ತಿರುವುದಿಲ್ಲ. ಮುನಿಯಪ್ಪನ ಇನ್ನೊಂದು ಹೆಸರು ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ.361/1 ಪಿತ್ರಾರ್ಜಿತ ಆಸ್ತಿಯಾಗಿರುತ್ತಾರೆ. ಅದನ್ನು ಮಾರಾಟ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ. ಆ ಆಸ್ತಿಯ ಖಾತೆ ಯಾರ ಹೆಸರಿನಲ್ಲಿ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಸರ್ವೆ ನಂ.360/1 ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ದಾವಾ

ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ತೋರಿಸಲು ದಾಖಲೆಗಳನ್ನು ಕೊಟ್ಟಿರುತ್ತೇನೆ. ದಾವಾ ಆಸ್ತಿಗಳನ್ನು ಮುನಿಯಪ್ಪ ಸಂಪಾದನೆ ಮಾಡಿರುತ್ತಾರೆ. ಮುನಿಯಪ್ಪ ಸಂಪಾದನೆ ಮಾಡಿರುವುದು ಎಂದು ತೋರಿಸಲು ದಾಖಲೆಗಳು ಇರುವುದಿಲ್ಲ.

ದಿನಾಂಕ 23.11.1945 ರಂದು ಪಾಪಣ್ಣ ಮತ್ತು ಚೆಂಗಲರಾಯಪ್ಪ ಇವರು ಪಾಲುವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಚಿಕ್ಕವೆಂಕಟಪ್ಪ ತನ್ನ ಪಾಲಿಗೆ ಬಂದ ಆಸ್ತಿಯನ್ನು ಮುನಿಯಪ್ಪ ಜೀವಂತ ಇದ್ದ ಕಾಲದಲ್ಲಿ ದಿನಾಂಕ 02.12.1957 ರಂದು ನೊಂದಾಯಿತ ವಿಲ್ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಕಿಚ್ಚಪ್ಪ ತೀರಿಕೊಂಡ ನಂತರ ಅವರ ಪಾಲಿನ ಆಸ್ತಿಯು ಅವರ ಮಕ್ಕಳಾದ ಚಿಕ್ಕತಿಮ್ಮಕ್ಕ ಮತ್ತು ಚಿಕ್ಕವೆಂಕಟಪ್ಪ ರವರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಐಟಂ ನಂ.2ನ್ನು ದಿನಾಂಕ 12.12.1967 ರಂದು  ಚಂಗಲರಾಯಪ್ಪನ ಪಾಲಿಗೆ ಹೋದ ಆಸ್ತಿಯನ್ನು ವೆಂಕಟಪ್ಪ ಎನ್ನುವವರಿಗೆ ಕ್ರಯ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಐಟಂ ನಂ.3ನ್ನು ಚಂಗಲರಾಯಪ್ಪ ಇವರು ದಿನಾಂಕ  24.04.1965 ರಂದು ಪೆದ್ದಪ್ಪಯ್ಯ ಎನ್ನುವವರಿಗೆ ಕ್ರಯಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ.  ಐಟಂ ನಂ.4 ನ್ನು ಮುನಿಯಪ್ಪ ಅವರ ತಂಗಿಯರಾದ ನಾನಮ್ಮ ಮತ್ತು ತಿಪ್ಪಕ್ಕ ಇವರಿಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.  ಚಿಕ್ಕವೆಂಕಟಪ್ಪ ಮತ್ತು ಮುನಿವೆಂಕಟಪ್ಪ, ಚಿಕ್ಕತಿಮ್ಮಕ್ಕ ಅವರ ವಂಶಸ್ಥರನ್ನ ಈ ಕೇಸಿನಲ್ಲಿ ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸರಿ. 1945 ರಿಂದಲೂ  ಮುನಿಯಪ್ಪನ ಮಕ್ಕಳಾದ ಪಾಪಣ್ಣ, ಚೆಂಗಲರಾಯಪ್ಪ ಮತ್ತು ಅವರ ವಂಶಸ್ಥರು ಅವರವರ ಆಸ್ತಿಗಳನ್ನು ಮಾರಾಟ ಮಾಡಿ ಪ್ರತ್ಯೇಕವಾಗಿ ಜೀವನ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲನ್ನು ವಿನಂತಿಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ. ಇದೆ

(ಸುಜಾತ ಸುವರ್ಣ.ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮುಳಬಾಗಿಲು.